**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 1898/2022**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಶಶಿಧರ | ಸಿ.ಡಬ್ಲ್ಯೂ-02 |
| ತಂದೆಯ ಹೆಸರು | : | ಸಣ್ಣ ಸೂರಯ್ಯ | ಪಿ.ಡಬ್ಲ್ಯೂ-02 |
| ವಯಸ್ಸು | : | 31 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಬುಡ್ಡಹಟ್ಟಿ ಗ್ರಾಮ | ದಿಃ 15.07.2026 |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಸಾಕ್ಷಿಗೆ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಾಕಶೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸ್ಥಳ ಪಂಚನಾಮೆ ಮತ್ತು ಕಚ್ಚಾ ನಾಕಶೆಯನ್ನು ಕ್ರಮವಾಗಿ ನಿಪಿ.2 ಮತ್ತು 3 ಅಂತ, ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿಃ 2(ಎ) ಮತ್ತು 3(ಎ) ಅಂತ ಗುರುತಿಸಲಾಯಿತು.

ಈಗ್ಗೆ 2 ವರ್ಷಗಳ ಹಿಂದೆ ಬಳ್ಳಾರಿ ರಸ್ತೆಯ ಸರ್ಕಲ್ ನಲ್ಲಿ ನಿಪಿ.2 ಮತ್ತು 3 ಕ್ಕೆ ಸಹಿ ಮಾಡಿರುತ್ತೇನೆ. ಅಪಘಾತದ ವಿಚಾರಕ್ಕೆ ಮಹಜರ್ ಕ್ರಮ ಜರುಗಿಸಿ ನನನ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ-16 ಮತ್ತು ಇನ್ನಿಬ್ಬರು ವ್ಯಕ್ತಿಗಳು ಇದ್ದೆವು, ಸದರಿಯವರ ಹೆಸರು ಹೇಳಲು ಆಗುವುದಿಲ್ಲ. ಅಪಘಾತ ಸ್ಥಳವನ್ನು ನನ್ನ ಜೊತೆಯಲ್ಲಿದ್ದ ಒಬ್ಬ ವ್ಯಕ್ತಿ ತೋರಿಸಿರುತ್ತಾರೆ. ಮಹಜರನ್ನು ಸಂಜೆ 05-30 ರ ಸಮಯದಲ್ಲಿ ಜರುಗಿಸಲಾಗಿರುತ್ತದೆ.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರವನ್ನು ಮಹಜರ್ ಸಮಯದಲ್ಲಿ ತೆಗೆಯಲಾಗಿರುತ್ತದೆ ಎಂದು ನೋಡಿ ಗುರುತಿಸಿದ ಮೇರೆಗೆ ಸದರಿ ಭಾವಚಿತ್ರವನ್ನು ನಿಪಿ.4 ಅಂತ ಗುರುತಿಸಲಾಯಿತು.

ಸಾಕ್ಷಿಯು ನಾಲ್ಕು ಭಾವಚಿತ್ರಗಳಲ್ಲಿರುವ ಲಾರಿಯನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ</u>**

ದಿನಾಂಕ 28.08.2022 ರಂದು ಚಳ್ಳಕೆರೆ ಟೌನಿನ ಬಳ್ಳಾರಿ ರಸ್ತೆಯಲ್ಲಿನ ಹೂವಿನ ಅಂಗಡಿಯ ಮುಂದೆ ಇರುವ ಹೆದ್ದಾರಿ ರಸ್ತೆಯಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ಜೊತೆ ಚಾಸಾ–3 ಮತ್ತು 8 ರವರು ಹಾಜರಿದ್ದರು ಎಂದರೆ ಸಾಕ್ಷಿಯ ಮೂರು ಜನ ಇದ್ದರು ಎಂದು ನುಡಿಯುತ್ತಾರೆ. ಚಾಸಾ–8 ರವರು ಅಪಘಾತ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿ. ಅಪಘಾತ ಪಡಿಸಿದ ಸ್ಥಳದಿಂದ ಸ್ವಲ್ಪ ಮುಂದೆ ಅಪಘಾತ ಪಡಿಸಿದ ಕೆಎ–14 ಎ–5445 ಟಿಪ್ಪರ್ ಲಾರಿಯು ನಿಂತಿದ್ದು, ಸದರಿ ವಾಹನವನ್ನು ಚಾಸಾ– ರವರು ನೋಡಿ ಗುರುತಿಸಿದ ಮೇರೆಗೆ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಭಾವಚಿತ್ರದಲ್ಲಿರುವ ಲಾರಿಯನ್ನು ಮಹಜರನ್ನು ಸಮಯದಲ್ಲಿ ಜಪ್ತು ಪಡಿಸಿಕೊಳ್ಳಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಲಾರಿಯನ್ನು ಜಪ್ತುಪಡಿಸಿಕೊಂಡಿರುವ ವಿಚಾರ ವಿಚಾರ ನನಗೆ ಗೊತ್ತಿದ್ದರು ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಜಿ.ಟಿ.ಎನ್., ಆರೋಪಿ ಪರ ವಕೀಲರಿಂದಃ</u>**

ನಿಪಿ.2 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ.3 ಕ್ಕೆ ಯಾವ ಕಾರಣಕ್ಕಾಗಿ ತೆಗೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಿಪಿ.2 ಮತ್ತು 4 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಮಹಜರ್ ಸ್ಥಳದ ಚಕ್ಕುಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿ. ಮಹಜರ್ ಎಷ್ಟು ಜನ ಸೇರಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.2 ಅನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ